**OS No. 144/2024**
**ಪಿ.ಡಬ್ಲ್ಯೂ: 1**

**ದಿನಾಂಕ: 31-10-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ನಂಬರ 2 ರಿಂದ 4 ರವರ ಪರ: ಶ್ರೀ ಎಮ್. ಎಸ್. ಕೆ. ವಕೀಲರಿಂದಃ**

1. ನನ್ನ ಮನೆ ನಂಬರ 4/57. ನನ್ನ ಮನೆಯ ಚಕಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮನೆ, ದಕ್ಷಿಣಕ್ಕೆ ಬಾವಿ, ಉತ್ತರಕ್ಕೆ ಶರಣಪ್ಪ ಇವರ ಮನೆ ಇದೆ. ಸದರಿ ಮನೆ ನನ್ನ ಹೆಸರಿನಲ್ಲಿದೆ. ಸದರಿ ದಾವಾ ಆಸ್ತಿಯು ಹಿರಿಯರ ಆಸ್ತಿ ಇರುತ್ತದೆ. ನಮ್ಮ ಅಡ್ಡ ಹೆಸರು ಗುಡ್ಡದೊರ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಕಿರುತ್ತೇನೆ. ಸದರಿ ದಾವಾ ಆಸ್ತಿಯ ಕ್ಷೇತ್ರ 10 x 20 ಇದೆ. ಸದರಿ ಮನೆಯ ಮುಂದೆ ಶೆಡ್ ಇರುತ್ತದೆ. ಸದರಿ ಶೆಡ್ ನಮ್ಮ ಜಾಗದಲ್ಲಿ ಇರುತ್ತದೆ. ಸದರಿ ಮನೆಯ ಒಟ್ಟು ಕ್ಷೇತ್ರ 30 x 40 ಇದೆ. ಸದರಿ ಶೆಡ್ ನಮ್ಮ ಮನೆಯ ಅಂಗಳದಲ್ಲಿ ಹಾಕಿರುತ್ತೇವೆ. ಸದರಿ ಶೆಡ್ ಸಾರ್ವಜನಿಕ ಜಾಗದಲ್ಲಿ ಹಾಕಿರುತ್ತೀರಿ ಎಂದರೆ ಸರಿಯಲ್ಲ.

2. ದಿನಾಂಕಃ 02-12-2023 ರಂದು ಪ್ರತಿವಾದಿಯರು ನೋಟಿಸು ನೀಡದೆ ದಾವಾ ಅಂಗಡಿಯನ್ನು ನೆಲಸಮ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕಃ 01-07-2023 ಮತ್ತು 28-11-2023 ರಂದು ನನಗೆ ಪಂಚಾಯತಿಯವರು ನೋಟಿಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾರ್ವಜನಿಕರು ದೂರು ನೀಡಿದ ನಂತರ ಪಂಚಾಯತಿಯವರು ನಮಗೆ ನೋಟಿಸು ನೀಡಿ ಅಂಗಡಿ ನೆಲಸಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೇರೆ ಅಂಗಡಿಗಳನ್ನು ನೋಟಿಸು ನೀಡಿ ತೆರವು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅವರಿಗೆ ನೋಟಿಸು ನೀಡಿರುತ್ತಾರೆ ಆದ್ದರಿಂದ ತೆರವು ಮಾಡಿಕೊಡಿಂರುತ್ತಾರೆ, ನನಗೆ ನೋಟಿಸು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

3. ಸದರಿ ಕಿರಾಣಿ ಅಂಗಡಿಯಲ್ಲಿ ಅಡಿಗೆ ಸಾಮಾಗ್ರಿಗಳು, ಪೂಜಾ ಸಾಮಾಗ್ರಿಗಳು, ಇತರ ವಸ್ತುಗಳು ಇದ್ದವು. ಸದರಿ ಅಂಗಡಿಯಲ್ಲಿ 4 ರಿಂದ 5 ಕ್ವಿಂಟಲ್ ಅಕ್ಕಿ, 10 ಕ್ವಿಂಟಲ್ ಬೆಲ್ಲ, 20 ಡಬ್ಬಿ ಎಣ್ಣೆ, 2 ಕ್ವಿಂಟಲ್ ಕಡ್ಲೆಬೇಳೆ, 1 ಕ್ವಿಂಟಲ್ ತೋಗರಿಬೇಳೆ ಮತ್ತು ಇತರ ಸಾಮಾಗ್ರಿಗಳು ಇದ್ದವು. ಎಲ್ಲಾ ಸಾಮಾಗ್ರಿಗಳು ಕೂಡಿ ಒಟ್ಟು 10-15 ಚೀಲಗಳು ಇದ್ದವು. ನಾವು ಅಂಗಡಿ ಸಾಮಾಗ್ರಿಗಳನ್ನು ವೆಂಕಟೇಶ್ವರ ಕಿರಾಣಿ ಅಂಗಡಿಯಿಂದ ತರುತ್ತಿದ್ದೇವು. ಸದರಿ ನಿಪಿ-3 ರಿಂದ ನಿಪಿ-10 ಎಲ್ಲಾ ಅಂಗಡಿಗಳಲ್ಲಿ ಕೊಡುತ್ತಾರೆ ಎಂದರೆ ಸಾಕ್ಷಿಯು ನಾವು ತೆಗೆದುಕೊಂಡಿರುತ್ತೇವೆ ಆದ್ದರಿಂದ ಬಿಲ್ಲು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 15 ವರ್ಷದಿಂದ ಅಂಗಡಿ ನಡೆಸುತ್ತಿದ್ದೇವೆ. ಸದರಿ ಅಂಗಡಿಯಿಂದ ವರ್ಷಕ್ಕೆ 5 ಲಕ್ಷ ರೂ. ಆದಾಯ ಬರುತ್ತದೆ. ಸದರಿ ಅಂಗಡಿಯ ವ್ಯವಹಾರದಿಂದ ವರ್ಷಕ್ಕೆ 2-3 ಲಕ್ಷ ರೂ. ಉಳಿತಾಯವಾಗುತ್ತದೆ. ಸದರಿ ನಾನು ಜಿ.ಎಸ್.ಟಿ ಕಟ್ಟುವುದಿಲ್ಲ. ನಾನು ನಿಪಿ-3 ರಿಂದ ನಿಪಿ-10 ನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಅಸಲು ದಾವಾ ನಂಬರ 263/2023 ಸಲ್ಲಿಸಿರುತ್ತೀರಾ? ಎಂದರೆ ಸರಿ. ಸದರಿ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಡಿಕ್ರಿ ಉಪಯೋಗ ಪಡೆದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನಗೆ ಯಾವುದೇ ನಷ್ಟವಾಗದೇ ಇದ್ದರೂ ಕೂಡ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**